**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 443/2020**

| | | |
|---|---|---|
| ಸಾಕ್ಷಿದಾರರ ಹೆಸರು | ಆರ್. ಕೃಷ್ಣೇಗೌಡ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | ರಾಮೇಗೌಡ | |
| ವಯಸ್ಸು | 53 ವರ್ಷ | |
| ಕೆಲಸ | ಎ.ಎಸ್.ಐ, ಬಿಳಿಗೆರೆ ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | ನಂಜನಗೂಡು | ದಿಃ 12.01.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಬಿಳಿಗೆರೆ ಪೋಲಿಸ್ ಠಾಣೆಯಲ್ಲಿ ದಿಃ 30.08.2024 ರಿಂದ ಇಲ್ಲಿಯವರೆಗೆ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.10.2025 ರಂದು ಆರೋಪಿಯ ವಿರುದ್ಧ ಉದ್ಘೋಷಣೆ ಬಗ್ಗೆ ನಂಜಪ್ಪ, ಸಿದ್ದರಾಜು ಇವರು ಪಂಚರಾಗಿ ಒಪ್ಪಿದ್ದು ಉದ್ಘೋಷಣೆಯನ್ನು ನಾನು ಈ ಮೇಲ್ಕಂಡ ಪಂಚರ ಸಮಕ್ಷಮ ಆರೋಪಿ ಮನೆಯ ಮುಂಭಾಗದಲ್ಲಿ ಪಂಚರ ಸಮಕ್ಷಮ ಉದ್ಘೋಷಣೆ ಆದೇಶವನ್ನು ಹೊರಡಿಸಿದ್ದು ಆರೋಪಿಯ ಬಗ್ಗೆ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರ ಮಾಡಲಾಗಿ ಆರೋಪಿಯು ತಲೆ ಮರೆಸಿಕೊಂಡಿದ್ದು ವಿಳಾಸದಲ್ಲಿ ವಾಸ ಇಲ್ಲವೆಂದು ತಿಳಿದುಬಂದಿರುತ್ತದೆ. ನ್ಯಾಯಾಲಯದ ಉದ್ಘೋಷಣೆ ಪ್ರತಿಯನ್ನು ಮನೆಯ ಗೋಡೆಗೆ ಮತ್ತು ನ್ಯಾಯಾಲಯದ ನೋಟಿಸ್ ಬೋರ್ಡ್ ನಲ್ಲಿ ಅಂಟಿಸಿ ಪ್ರಚಾರ ಮಾಡಿರುತ್ತೇವೆ. ಮತ್ತು ಈತನ ಸುಳಿವು ಸಿಕ್ಕಲ್ಲಿ ಪೋಲಿಸ್ ಠಾಣೆಗೆ ತಿಳಿಸುವಂತೆ ಟಾಂ ಟಾಂ ಮಾಡಿಸಿರುತ್ತೇವೆ.

ಹೊಸಕೋಟೆ ಗ್ರಾಮ ಪಂಚಾಯ್ತಿ ಕಾರ್ಯಾಲಯ ಇವರು ಆರೋಪಿಯ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಮತ್ತು ಚರಾಸ್ತಿ ಇರುವುದಿಲ್ಲ ಎಂದು ದಿಃ 19.11.2025 ರಂದು ಹಿಂಬರಹ ನೀಡಿರುತ್ತಾರೆ.

ಸಾಕ್ಷಿಗೆ ಉದ್ಘೋಷಣೆ ಮಾಡಿರುವ ಎರಡು ಸ್ಥಳ ಮಹಜರ್ ದಾಖಲೆಗಳನ್ನು ತೋರಿಸಿದ್ದು ಅದನ್ನು ನಿಪಿ–1 ಮತ್ತು 2 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಹೊಸಕೋಟೆ ಗ್ರಾಮ ಪಂಚಾಯ್ತಿ ಇವರು ನೀಡಿರುವ ಹಿಂಬರಹದಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**